**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-17)**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ 29) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(i) (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ1) "ಗರಿಷ್ಠ ಅವಧಿ" ಎಂದರೆ, ಒಂದು ವಲಯದಲ್ಲಿ ಬೇರೆಬೇರೆ ವೃಂದಗಳಲ್ಲಿ ಒಟ್ಟಾರೆ ಸಲ್ಲಿಸಿರುವ ಹತ್ತು ವರ್ಷಗಳ ನಿರಂತರ ಸೇವೆ;

"(ಸಿ2) "ಕನಿಷ್ಠ ಅವಧಿ" ಎಂದರೆ, ಒಂದು ವಲಯದಲ್ಲಿ ಬೇರೆಬೇರೆ ವೃಂದಗಳಲ್ಲಿ ಒಟ್ಟಾರೆ ಸಲ್ಲಿಸಿರುವ ಐದು ವರ್ಷಗಳ ನಿರಂತರ ಸೇವೆ;

(ii) (ಜೆ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(ಜೆ) "ಜ್ಯೇಷ್ಠತಾ ಘಟಕ" ಎಂದರೆ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಹುದ್ದೆಗಳಿಗಾಗಿ ಶೈಕ್ಷಣಿಕ ಜಿಲ್ಲೆ, ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಹುದ್ದೆಗಳಿಗಾಗಿ ಕಂದಾಯ ವಿಭಾಗ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಹುದ್ದೆಗಳಿಗಾಗಿ ರಾಜ್ಯ;"

**3. 3ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿನ (3)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**4. 3ಎ ಮತ್ತು 3ಬಿ ಹೊಸ ಪ್ರಕರಣಗಳ ಸೇರ್ಪಡೆ.–** ಮೂಲ ಅಧಿನಿಯಮದ 3ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**3ಎ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಶಿಕ್ಷಕರ ಕಡ್ಡಾಯ ವರ್ಗಾವಣೆ.–** (1) 'ಎ' ವಲಯದಲ್ಲಿ ಗರಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದ ಮತ್ತು ಎರಡು ವರ್ಷಗಳಿಗಿಂತ ಹೆಚ್ಚು ಸೇವೆ ಉಳಿದಿರುವ ಶಿಕ್ಷಕನನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ 'ಸಿ' ವಲಯದ ಹುದ್ದೆಗೆ ಕಡ್ಡಾಯವಾಗಿ ವರ್ಗಾವಣೆ ಮಾಡತಕ್ಕದ್ದು:

ಪರಂತು, ಮಾನ್ಯತೆ ಪಡೆದ ಶಿಕ್ಷಕರ ಅಥವಾ ನೌಕರರ ಸಂಘದ ಪದಾಧಿಕಾರಿಯಾಗಿರುವ ಶಿಕ್ಷಕನಿಗೆ ಅಥವಾ ಅವಿವಾಹಿತ ಮಹಿಳಾ ಶಿಕ್ಷಕಿಗೆ ಅಥವಾ ವಿಧವೆಯಾಗಿರುವ ಮಹಿಳಾ ಶಿಕ್ಷಕಿಗೆ ಅಥವಾ ಶೇಕಡಾ ನಲವತ್ತಕ್ಕಿಂತ ಹೆಚ್ಚಿನ ಅಂಗವೈಕಲ್ಯವನ್ನು ಹೊಂದಿರುವ ಶಿಕ್ಷಕರಿಗೆ ಈ ಉಪಪ್ರಕರಣದ ಉಪಬಂಧದಿಂದ ವಿನಾಯಿತಿಯನ್ನು ನೀಡತಕ್ಕದ್ದು.

(2) 'ಎ' ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಮತ್ತು ಕರ್ನಾಟಕ ಸಿವಿಲ್ ಸೇವೆಗಳ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅಡಿಯಲ್ಲಿ ಕಠಿಣ ದಂಡನೆಯನ್ನು ಅನುಭವಿಸುತ್ತಿರುವ ಅಥವಾ ಕಾನೂನಿನ ನ್ಯಾಯಾಲಯದಲ್ಲಿ ಕ್ರಿಮಿನಲ್ ಆಪಾದನೆಗಳನ್ನು ಎದುರಿಸುತ್ತಿರುವ ಶಿಕ್ಷಕನನ್ನು, ಆತನು ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸದಿದ್ದರೂ ಸಹ 'ಸಿ' ವಲಯಕ್ಕೆ ವರ್ಗಾವಣೆ ಮಾಡತಕ್ಕದ್ದು.

(3) (1)ನೇ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಕಡ್ಡಾಯ ವರ್ಗಾವಣೆಗೆ ಖಾಲಿ ಹುದ್ದೆಗಳು ಲಭ್ಯವಿರದಿದ್ದಲ್ಲಿ, 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ 'ಸಿ' ವಲಯದಲ್ಲಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದ ಅಲ್ಲಿ ಇರುವ ಶಿಕ್ಷಕರಿಗೆ ವರ್ಗಾವಣೆಯ ಆಯ್ಕೆಯನ್ನು ನೀಡುವ ಮೂಲಕ ಖಾಲಿ ಹುದ್ದೆಗಳನ್ನು ಸೃಜಿಸಬಹುದು.

**3ಬಿ. ಶಿಕ್ಷಕರ ಸರದಿ.–** (1) 'ಬಿ' ವಲಯ ಅಥವಾ 'ಸಿ' ವಲಯದಲ್ಲಿ ಕನಿಷ್ಠ ಅವಧಿಯ ಸೇವೆಯನ್ನು ಸಲ್ಲಿಸಿರುವ ಶಿಕ್ಷಕನಿಗೆ, ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಅನುಕ್ರಮವಾಗಿ 'ಎ' ವಲಯಕ್ಕೆ ಅಥವಾ 'ಬಿ' ವಲಯಕ್ಕೆ ವರ್ಗಾವಣೆಯನ್ನು ಕೋರುವ ಆಯ್ಕೆಯನ್ನು ನೀಡತಕ್ಕದ್ದು.

(2) 'ಎ' ವಲಯದಲ್ಲಿ ಭರ್ತಿ ಮಾಡದೆ ಉಳಿದಿರುವ ಖಾಲಿ ಹುದ್ದೆಯನ್ನು, ಆಯ್ಕೆಯನ್ನು ಚಲಾಯಿಸುವ ಮೂಲಕ 'ಬಿ' ವಲಯದಲ್ಲಿನ ಶಿಕ್ಷಕನ ವರ್ಗಾವಣೆಯಿಂದ ತುಂಬತಕ್ಕದ್ದು ಮತ್ತು ಆನಂತರವೂ ಯಾವುದೇ ಖಾಲಿ ಹುದ್ದೆಯನ್ನು ಭರ್ತಿ ಮಾಡಲಾಗದಿದ್ದಲ್ಲಿ, 'ಸಿ' ವಲಯದಲ್ಲಿನ ಅರ್ಹ ಶಿಕ್ಷಕರ ವರ್ಗಾವಣೆಯ ಮೂಲಕ ಭರ್ತಿ ಮಾಡಬಹುದು.

(3) 'ಬಿ' ವಲಯದಲ್ಲಿ ಭರ್ತಿ ಮಾಡದೆ ಉಳಿದಿರುವ ಖಾಲಿ ಹುದ್ದೆಯನ್ನು, ಆಯ್ಕೆಯನ್ನು ಚಲಾಯಿಸುವ ಮೂಲಕ 'ಸಿ' ವಲಯದಲ್ಲಿನ ಶಿಕ್ಷಕನ ವರ್ಗಾವಣೆಯಿಂದ ಭರ್ತಿ ಮಾಡತಕ್ಕದ್ದು ಮತ್ತು ಆನಂತರವೂ 'ಬಿ' ವಲಯದಲ್ಲಿ ಯಾವುದೇ ಖಾಲಿ ಹುದ್ದೆಯನ್ನು ಭರ್ತಿ ಮಾಡಲಾಗದಿದ್ದಲ್ಲಿ, 3ಎ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ವರ್ಗಾಯಿಸಬೇಕಾದ 'ಎ' ವಲಯದಲ್ಲಿನ ಶಿಕ್ಷಕನ ವರ್ಗಾವಣೆಯ ಮೂಲಕ ಭರ್ತಿ ಮಾಡಬಹುದು."

**5. 4ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಈ ಅಧಿನಿಯಮದ ಅಡಿಯಲ್ಲಿ ಒಂದು ವರ್ಷದಲ್ಲಿ ಯಾವುದೇ ವೃಂದದಲ್ಲಿ ಮತ್ತು ಯಾವುದೇ ಜೇಷ್ಠತಾ ಘಟಕದಲ್ಲಿ ವರ್ಗಾವಣೆಗಳ ಒಟ್ಟು ಸಂಖ್ಯೆಯು ಶೇಕಡಾ ಹದಿನೈದರಷ್ಟನ್ನು ಅಥವಾ ನಿಯಮಿಸಬಹುದಾದ ಯಾವುದೇ ಕೆಳಗಿನ ಮಿತಿಯನ್ನು ಮೀರತಕ್ಕದ್ದಲ್ಲ."

**6. 5ನೇ ಪ್ರಕರಣದ ಪ್ರತಿಯೋಜನೆ.–** ಮೂಲ ಅಧಿನಿಯಮದ 5ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**"5. ನಿರ್ದಿಷ್ಟ ಹುದ್ದೆಗಳಿಗೆ ಶಿಕ್ಷಕರ ವರ್ಗಾವಣೆ.–** (1) ಕೇಂದ್ರ ಪ್ರಾಯೋಜಿತ ಸ್ಕೀಮುಗಳ ಅಡಿಯಲ್ಲಿ ಸೃಜನೆಯಾದ ಹುದ್ದೆಗಳಿಗೆ ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಹುದ್ದೆಗಳಿಗೆ ಸಂಬಂಧಿಸಿದ ಖಾಲಿ ಸ್ಥಳಗಳನ್ನು, ಇತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಮೊದಲು ಸಂಬಂಧಪಟ್ಟ ವಲಯದಲ್ಲಿ ಮೊದಲು ಭರ್ತಿ ಮಾಡತಕ್ಕದ್ದು.

(2) ಸಹಾಯಕ ನಿರ್ದೇಶಕ (ಮಧ್ಯಾಹ್ನದ ಊಟ), ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ, ಸಹಾಯಕ ಯೋಜನಾ ಸಮನ್ವಯಾಧಿಕಾರಿ, ಶಿಕ್ಷಣ ಸಮನ್ವಯಾಧಿಕಾರಿ ಮತ್ತು ವಿಷಯ ತಪಾಸಕ ಹುದ್ದೆಗಳನ್ನು, ಅಂಥ ಹುದ್ದೆಗಳಿಗಾಗಿ ನಿಯಮಿಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಶಿಕ್ಷಕರ ಸ್ಥಳ ನಿಯುಕ್ತಿಯ ಮೂಲಕ ಮಾತ್ರವೇ ಭರ್ತಿ ಮಾಡತಕ್ಕದ್ದು:

ಪರಂತು, (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಹುದ್ದೆಗಳಿಗೆ ಸ್ಥಳ ನಿಯುಕ್ತಿಯ ಕನಿಷ್ಠ ಮತ್ತು ಗರಿಷ್ಠ ಅವಧಿಗಳು ಅನುಕ್ರಮವಾಗಿ ಮೂರು ವರ್ಷಗಳು ಮತ್ತು ಐದು ವರ್ಷಗಳಾಗಿರತಕ್ಕದ್ದು.

7. **6ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿನ ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii)(2)ನೇ ಉಪಪ್ರಕರಣದಲ್ಲಿ,–

(ಎ) (1)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಶಿಕ್ಷಕರ ಜೇಷ್ಠತಾ ಘಟಕದ ಹೊರಗಿನ ಸರ್ಕಾರಿ ಅಥವಾ ಸಾರ್ವಜನಿಕ ವಲಯ ಉದ್ದಿಮೆಯ ಹುದ್ದೆಯಲ್ಲಿರುವ ನೌಕರರನ್ನು ಶಿಕ್ಷಕನು ಮದುವೆಯಾದ ಸಂದರ್ಭದಲ್ಲಿ, ಅವನ ಸೇವಾವಧಿಯ ಹೊರತಾಗಿಯೂ ವರ್ಗಾಯಿಸಬಹುದು;"

(ಬಿ) (5)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(6) ಯಾವುದೇ ವಲಯದಲ್ಲಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದ ಶಿಕ್ಷಕನು ಹೆಚ್ಚಿನ ಶಿಕ್ಷಕರನ್ನು ಹೊಂದಿಲ್ಲದ ಮತ್ತೊಂದು ಜೇಷ್ಠತಾ ಘಟಕದಲ್ಲಿನ ಅರ್ಹ ವಲಯಕ್ಕೆ ವರ್ಗಾವಣೆಯನ್ನು ಕೋರಿದಲ್ಲಿ, ಆತನನ್ನು ಅಲ್ಲಿಗೆ ವರ್ಗಾಯಿಸಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(1) ಶಿಕ್ಷಕರಿಗೆ ತಮ್ಮ ಆದ್ಯತೆಯ ಮೇರೆಗೆ ಸ್ಥಳ ನಿಯುಕ್ತಿಯನ್ನು ಕೋರುವ ಆಯ್ಕೆಗಳು ಮತ್ತು ಮೃದುತ್ವವನ್ನು ಕಲ್ಪಿಸುವ ಮೂಲಕ ಶಿಕ್ಷಕರ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿ ಪ್ರಕ್ರಿಯೆಯನ್ನು ಸುಗಮಗೊಳಿಸುವುದು;

(2) ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಕೇಂದ್ರೀಯ ಪ್ರಾಯೋಜಿತ ಸ್ಕೀಮಿನ ಅಡಿಯಲ್ಲಿನ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು; ಮತ್ತು

(3) ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| **ಖಂಡ: 5** | ಖಂಡ 5ರ ಮೂಲಕ ಸೇರಿಸಲು ಉದ್ದೇಶಿಸಲಾದ 4ನೇ ಪ್ರಕರಣದ ಪರಂತುಕವು, ಒಂದು ವರ್ಷದಲ್ಲಿ ಶಿಕ್ಷಕರ ವರ್ಗಾವಣೆಗೆ ಕೆಳಗಿನ ಮಿತಿಯನ್ನು (lower limit) ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ತನ್ವೀರ್ ಸೇಠ್**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

# ಅನುಬಂಧ

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ 29) ಉದ್ಧೃತ ಭಾಗ

XX XX XX

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

XX XX XX

(ಸಿ) "ಸಕ್ಷಮ ಪ್ರಾಧಿಕಾರಿ" ಎಂದರೆ, ಶಿಕ್ಷಕರ ವರ್ಗಾವಣೆ ಆದೇಶಗಳನ್ನು ಹೊರಡಿಸಲು ಸಕ್ಷಮನಾದ ಪ್ರಾಧಿಕಾರಿ;

XX XX XX

(ಜೆ) "ಜೇಷ್ಠತಾ ಘಟಕ" ಎಂದರೆ, ಶಿಕ್ಷಕ ಹುದ್ದೆಗೆ ನೇಮಕ ಮಾಡಲು ಸಕ್ಷಮವಾಗಿರುವ ನೇಮಕಾತಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿ.

XX XX XX

**3. ಗ್ರಾಮೀಣ ಪ್ರದೇಶಗಳಿಗೆ ಶಿಕ್ಷಕರ ಕಡ್ಡಾಯ ನೇಮಕಾತಿ.**– (1) ಪ್ರತಿಯೊಂದು ನೇಮಕಾತಿ ಪ್ರಾಧಿಕಾರವು, ಶಾಲೆಗಳಲ್ಲಿ ಅಥವಾ ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಪ್ರಾರಂಭಿಕ ನೇಮಕ ಮಾಡುವಾಗ ಮೊದಲಿಗೆ ಸಿ–ವಲಯದಲ್ಲಿಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಖಚಿತಪಡಿಸಿಕೊಳ್ಳತಕ್ಕದ್ದು:

ಪರಂತು, ಗ್ರಾಮೀಣ ಪ್ರದೇಶಗಳಿಗೆ ಶಿಕ್ಷಕರ ಕಡ್ಡಾಯ ನೇಮಕಾತಿಗೆ ಸಂಬಂಧಿಸಿದ ಉಪಬಂಧಗಳು ಯಾವುದೇ ಗ್ರಾಮೀಣ ಪ್ರದೇಶವನ್ನೂ ಒಳಗೊಳ್ಳದ ಜೇಷ್ಠತಾ ಘಟಕಕ್ಕೆ ನೇಮಕಗೊಂಡ ಶಿಕ್ಷಕನಿಗೆ ಅನ್ವಯವಾಗತಕ್ಕದ್ದಲ್ಲ.

(2) ಯಾವುದೇ ಒಂದು ನಿರ್ದಿಷ್ಟ ವಲಯದಲ್ಲಿ ಪ್ರಾರಂಭಿಕ ನೇಮಕ ಅಥವಾ ವರ್ಗಾವಣೆಗೆ ಯಾವುದೇ ಖಾಲಿ ಹುದ್ದೆ ದೊರೆಯದಿದ್ದರೆ, ಕನಿಷ್ಠ ಸಂಖ್ಯೆಯ ಸೇವಾ ವರ್ಷಗಳನ್ನು ಪೂರ್ಣಗೊಳಿಸಿದ ಒಬ್ಬ ಶಿಕ್ಷಕನನ್ನು, ಮತ್ತೊಂದು ವಲಯಕ್ಕೆ ಆದ್ಯತೆಯ ಕ್ರಮದಲ್ಲಿ ಸಿ–ವಲಯದಿಂದ ಬಿ–ವಲಯಕ್ಕೆ, ಬಿ–ವಲಯದಿಂದ ಎ–ವಲಯಕ್ಕೆ ಅಥವಾ ಎ–ವಲಯದಿಂದ ಅದೇ ಜೇಷ್ಠತಾ ಘಟಕದೊಳಗಿನ ನಗರ ಪ್ರದೇಶಕ್ಕೆ ವರ್ಗಾವಣೆ ಮಾಡುವ ಮೂಲಕ ಖಾಲಿ ಹುದ್ದೆಯನ್ನು ಸೃಜಿಸಬಹುದು:

ಪರಂತು, ಸಿ–ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಯಾವೊಬ್ಬ ಶಿಕ್ಷಕನು ಬಿ–ವಲಯಕ್ಕೆ ವರ್ಗಾವಣೆಯಾಗಲು ಅರ್ಹನಾಗಿದ್ದು ಅದೇ ರೀತಿಯಾಗಿ ಬಿ–ವಲಯದಲ್ಲಿ ಸೇವೆಸಲ್ಲಿಸುತ್ತಿರುವ ಒಬ್ಬ ಶಿಕ್ಷಕನು ಎ–ವಲಯಕ್ಕೆ ವರ್ಗಾವಣೆಯಾಗಲು ಅರ್ಹನಾಗಿದ್ದು, ಅವನು ಸಂದರ್ಭಾನುಸಾರ ಸಿ–ವಲಯದಲ್ಲೇ ಅಥವಾ ಬಿ–ವಲಯದಲ್ಲೇ ಸೇವೆ ಸಲ್ಲಿಸುವುದನ್ನು ಮುಂದುವರಿಸಲು ಇಚ್ಛಿಸಿದರೆ, ಅವನು ಆಯಾ ವಲಯದಲ್ಲಿಯೇ ಸೇವೆಸಲ್ಲಿಸುವುದನ್ನು ಮುಂದುವರಿಸಲು ಅನುಮತಿ ನೀಡಬಹುದು.

**ವಿವರಣೆ**:– ಆದ್ಯತಾ ಕ್ರಮವನ್ನು, ಇತರ ವಿಷಯಗಳ ಜೊತೆಗೆ, ವಿವಿಧ ಕೇಡರ್‌ಗಳಲ್ಲಿ ಒಂದು ವಲಯದಲ್ಲಿ ಒಬ್ಬ ಶಿಕ್ಷಕನ ಸೇವೆಯ ಒಟ್ಟು ಅವಧಿಯ ಆಧಾರದ ಮೇಲೆ ಹಾಗೂ ನಿಯಮಿಸಬಹುದಾದ ಯಾವುದೇ ಇತರ ಮಾನದಂಡಗಳ ಆಧಾರದ ಮೇಲೆ ಲೆಕ್ಕ ಹಾಕತಕ್ಕದ್ದು

(3) ನಗರ ಪ್ರದೇಶದಲ್ಲಿರುವ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಅಡಿಯಲ್ಲಿ ವಿಧಿಸಿದ ಕಾಲಬದ್ಧ ದಂಡನೆಯನ್ನು ಅನುಭವಿಸುತ್ತಿರುವಂಥ ಅಥವಾ ನ್ಯಾಯಾಲಯದಲ್ಲಿ ಕ್ರಿಮಿನಲ್ ದೋಷಾರೋಪಣೆಯನ್ನು ಎದುರಿಸುತ್ತಿರುವಂಥ ಒಬ್ಬ ಶಿಕ್ಷಕನನ್ನು ಸಿ ವಲಯಕ್ಕೆ ವರ್ಗಾಯಿಸಬಹುದು. ಸಿ ವಲಯದಲ್ಲಿ ಯಾವುದೇ ಖಾಲಿ ಸ್ಥಾನವು ದೊರೆಯದೇ ಹೋದರೆ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಒಂದು ಖಾಲಿಸ್ಥಾನವನ್ನು ಸೃಷ್ಟಿಮಾಡಬಹುದು:

ಪರಂತು, ಅಂಥ ಶಿಕ್ಷಕನು ಬಿ–ವಲಯದಲ್ಲಿ ಅಥವಾ ಸಿ–ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಅಂಥ ಶಿಸ್ತು ವ್ಯವಹರಣೆಗಳು, ಕ್ರಿಮಿನಲ್ ವ್ಯವಹರಣೆಗಳು ಅಥವಾ ಸಂದರ್ಭಾನುಸಾರ ದಂಡನೆ ಅವಧಿ ಪೂರ್ಣಗೊಳ್ಳುವವರೆಗೆ, ಅವನು ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಅದೇ ವಲಯದಲ್ಲಿ ಇನ್ನೊಂದು ಸ್ಥಳಕ್ಕೆ ವರ್ಗಾಯಿಸತಕ್ಕದ್ದು, ಆದರೆ ಅವನನ್ನು, ಗ್ರಾಮೀಣ ಪ್ರದೇಶದಿಂದ ಹೊರಕ್ಕೆ ವರ್ಗಾವಣೆ ಮಾಡಕೂಡದು.

XX XX XX

**4. ಕೌನ್ಸಿಲಿಂಗ್ ಮೂಲಕ ವರ್ಗಾವಣೆ.–** ಈ ಅಧಿನಿಯಮದ ಅಡಿಯಲ್ಲಿ ಒಬ್ಬ ಶಿಕ್ಷಕನ ವರ್ಗಾವಣೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಡೆಸುವ ಗಣಕೀಕೃತ ಕೌನ್ಸಲಿಂಗ್ ವಿಧಾನದ ಮೂಲಕ ಮಾಡತಕ್ಕದ್ದು.

XX XX XX

**5. ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ಶಿಕ್ಷಕರ ವರ್ಗಾವಣೆ.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಒಂದು ವಲಯದಲ್ಲಿಯ ಯಾವುದೇ ಶಾಲೆಯಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ಒಬ್ಬ ಶಿಕ್ಷಕನನ್ನು ಆ ಶಾಲೆಯಲ್ಲಿ ಸಲ್ಲಿಸಿರುವ ಸೇವಾ ಅವಧಿಯ ಆಧಾರದ ಮೇಲೆ ಅದೇ ಜೇಷ್ಠತಾ ಘಟಕದೊಳಗೆ ಅದೇ ವಲಯದ ಇನ್ನೊಂದು ಶಾಲೆಗೆ ವರ್ಗಾಯಿಸತಕ್ಕದ್ದು:

ಪರಂತು, ಒಂದು ಜೇಷ್ಠತಾ ಘಟಕದಲ್ಲಿ ಅಂಥ ವರ್ಗಾವಣೆಗಳ ಒಟ್ಟು ಸಂಖ್ಯೆಯು, ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗಳ ಸಂದರ್ಭದಲ್ಲಿ ಶೇಕಡಾ ಐದರಷ್ಟನ್ನು ಮತ್ತು ಅಂತರ್ ಘಟಕೀಯ ಜೇಷ್ಠತಾ ವರ್ಗಾವಣೆಗಳ ಸಂದರ್ಭದಲ್ಲಿ ಶೇಕಡಾ ಮೂರರಷ್ಟನ್ನು ಹಾಗೂ ಒಟ್ಟಾರೆಯಾಗಿ ಆ ಜೇಷ್ಠತಾ ಘಟಕದ ಕೇಡರ್‌ನಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳ ಒಟ್ಟು ಸಂಖ್ಯೆ ಶೇಕಡಾ ಎಂಟರಷ್ಟನ್ನು ಮೀರತಕ್ಕದ್ದಲ್ಲ.

XX XX XX

**6. ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ಶಿಕ್ಷಕರನ್ನು ವರ್ಗಾವಣೆ ಮಾಡುವುದಕ್ಕೆ ನಿಷೇಧ.–** (1) ಒಬ್ಬ ಶಿಕ್ಷಕನನ್ನು (2)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಆತ ನೇಮಕಗೊಂಡ ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಮಾಡತಕ್ಕದ್ದಲ್ಲ:

ಪರಂತು, ಒಂದು ಜೇಷ್ಠತಾ ಘಟಕದಲ್ಲಿ ಹೆಚ್ಚುವರಿ ಎಂದು ಕಂಡು ಬಂದ ಒಬ್ಬ ಶಿಕ್ಷಕನನ್ನು ಇನ್ನೊಂದು ಜೇಷ್ಠತಾ ಘಟಕದಲ್ಲಿರುವ ಶಿಕ್ಷಕರು ಅಗತ್ಯವಿರುವ ಶಾಲೆಗೆ ಅಥವಾ ಪದವಿಪೂರ್ವ ಕಾಲೇಜಿಗೆ ವರ್ಗಾಯಿಸಬಹುದು ಅಥವಾ ಪುನಃ ನಿಯೋಜಿಸಬಹುದು:

ಮತ್ತು ಪರಂತು, ಸೇವೆಯಲ್ಲಿರುವ ಮತ್ತು ವರ್ಗಾವಣೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಒಂದು ಜ್ಯೇಷ್ಠತೆಯ ಘಟಕದಲ್ಲಿ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಪೂರ್ಣಗೊಳಿಸಿದ ಶಿಕ್ಷಕನನ್ನು, ಆತನ ಕೋರಿಕೆಯ ಮೇರೆಗೆ, ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಜ್ಯೇಷ್ಠತೆಯ ಮತ್ತೊಂದು ಘಟಕಕ್ಕೆ, ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಪರಿಮಿತಿಗೊಳಪಟ್ಟು, ಆತನ ಸೇವೆಯಲ್ಲಿ ಒಂದು ಬಾರಿಗಿಂತ ಹೆಚ್ಚಿಲ್ಲದಂತೆ, ವರ್ಗಾಯಿಸಬಹುದು.

(2) ಈ ಮುಂದಿನ ಪ್ರಕರಣಗಳಲ್ಲಿ (1)ನೇ ಉಪಪ್ರಕರಣದ ಉಪಬಂಧವನ್ನು ಸಡಿಲಗೊಳಿಸಬಹುದು, ಎಂದರೆ:–

(1) ಗಂಡ, ಹೆಂಡತಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಮತ್ತು ಶಿಕ್ಷಕರು ಪ್ರಸ್ತುತ ಇರುವ ಜೇಷ್ಠತಾ ಘಟಕದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿದ್ದಲ್ಲಿ, ಕೌನ್ಸಿಲಿಂಗ್ ಮೂಲಕ ಆತನ/ಆಕೆಯ ಹೆಂಡತಿ/ಗಂಡ ಸೇವೆ ಸಲ್ಲಿಸುತ್ತಿರುವ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ಸ್ಪಷ್ಟ ಖಾಲಿ ಸ್ಥಳದ ಲಭ್ಯತೆಯ ಆಧಾರದ ಮೇರೆಗೆ ಸೇವಾ ಅವಧಿಯಲ್ಲಿ ಎರಡು ಬಾರಿಗಿಂತ ಹೆಚ್ಚಲ್ಲದೆ ವರ್ಗಾವಣೆ ಮಾಡಬಹುದು.

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1194–ಪ್ರತಿಗಳು 1000, 25ನೇ ಮಾರ್ಚ್, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**
**(Adjourned Meetings)**

# THE KARNATAKA STATE CIVIL SERVICES (REGULATION OF TRANSFER OF TEACHERS) (AMENDMENT) BILL, 2017

**(L.A. Bill No. 17 of 2017)**

A Bill further to amend the Karnataka State Civil Services (Regulation of Transfer of Teachers) Act, 2007.

Whereas it is expedient further to amend the Karnataka State Civil Services (Regulation of Transfer of Teachers) Act, 2007 (Karnataka Act 29 of 2007) for the purposes hereinafter appearing.

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.-** (1) This Act may be called the Karnataka State Civil Services (Regulation of transfer of teachers) (Amendment) Act, 2017.

(2) It shall come into force at once.

**2. Amendment of section 2.-** In the Karnataka State Civil Services (Regulation of transfer of teachers) Act, 2007 (Karnataka Act 29 of 2007) (hereinafter referred to as the principal Act), in section 2,-

(i) after clause (c), the following shall be inserted, namely:-

"(c1) "maximum period" means a continuous service of ten years in a Zone in different cadres put together;

"(c2) "minimum period" means a continuous service of five years in a Zone in different cadres put together;"

(ii) for clause (j), the following shall be substituted, namely:-

"(j) "unit of seniority" means an educational district for posts in Government primary schools, a revenue division for posts in Government high schools and the state for posts in Government pre-university colleges;"

**3. Substitution of section 3.-** In section 3 of the principal Act, the sub-section(3) shall be omitted.

**4. Insertion of new sections 3A and 3B.-** After section 3 of the principal Act, the following shall be inserted, namely:-

"**3A. Compulsory transfer of a teacher in public interest.-** (1) A teacher who has completed maximum period of service in Zone A and has

more than two years of remaining service shall be transferred compulsorily to a post in Zone 'C' in public interest.

Provided that a teacher who is a office bearer of a recognized teacher's or employee's association or an unmarried female teacher or a widow female teacher or a teacher having more than forty percent physical disability shall be given exemption from provision of this sub-section.

(2) A teacher serving in Zone A and undergoing a major penalty under the Karnataka Civil Service (Classification, Control and Appeal) Rules, 1957 or facing criminal charges in Court of Law shall be transferred to Zone 'C' even if he has not completed minimum period of service.

(3) If no vacancies are available for such compulsory transfer under sub-section (1) or (2), the vacancies may be created by offering transfer option to existing teachers who have completed minimum period of service in Zone 'C' as provided in sub-section (2) of section 3.

**3B. Rotation of teachers.-** (1) A teacher who has served minimum period of service in Zone 'B' or Zone 'C' shall be offered an option to seek transfer to Zone 'A' or Zone 'B' respectively subject to availability of vacancies.

(2) A vacancy remaining unfilled in Zone 'A' shall be filled by transfer of teacher in Zone 'B' on exercise of option and any vacancy still not filled may be filled by transfer of eligible teachers in Zone 'C'.

(3) A vacancy remaining unfilled in Zone 'B' shall be filled by transfer of a teacher in Zone 'C' on exercise of option and any vacancy still not filled in Zone B may be filled by transfer of teacher in Zone 'A' who are to be transferred compulsorily under sub-section (1) of section 3A."

**5. Amendment of section 4.-** In section 4 of the principal Act, the following proviso shall be inserted, namely:-

"Provided that, the total number of transfers in a year in any cadre and in any unit of seniority under this Act shall not exceed fifteen percent or any lower limit as may be prescribed ".

**6. Substitution of section 5.-** For section 5 of the principal Act, the following shall be substituted, namely:-

"**5. Transfer of Teachers to specified posts.-** (1) The vacancies related to posts created under Centrally sponsored schemes and such other posts as may be specified by the State Government shall be filled first in the respective zone before filling up other vacancies.

(2) The posts of Assistant Director (Mid-Day Meal), Block Resource Person, Cluster Resource Person, Assistant Project Coordinator, Education Coordinator and Subject Inspector shall be filled only by posting of teachers who have passed the examination prescribed for such posts:

Provided that, the minimum and maximum periods of posting to the posts included in sub-section (2) shall be three years and five years respectively."

**7. Amendment of section 6.-** In section 6 of the principal Act,-

(i) in sub-section (1), the second proviso shall be omitted; and

(ii) in sub-section (2),-

(a) for clause (1), the following shall be substituted, namely:-

"(1) In case of a teacher married to a Government or PSU employee posted outside the unit of seniority of the teacher irrespective of the period of service;"

(b) after clause (5), following shall be inserted, namely:-

"(6) Where a teacher has completed minimum period of service in any Zone and is seeking transfer to an eligible Zone in another unit of seniority which does not has surplus teachers."

## STATEMENT OF OBJECTS AND REASONS

It is considered necessary to amend the Karnataka State Civil Services (Regulation of transfer of teachers) Act, 2007 to,-

(1) streamline the process of transfer and posting of teachers, by providing options and flexibility to teachers and to seek postings of their preference;

(2) ensure filling of vacancies in rural areas and those under centrally sponsored scheme on priority; and

(3) certain consequential amendments are also proposed.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause 5:** | Proviso to section 4 proposed to be inserted by clause 5 empowers the State Government to prescribe the lower limit of transfer of teachers in a year. |

The proposed delegation of Legislative power is normal in character.

**TANVEER SAIT**
Minister for Primary and
Secondary Education

**S. Murthy**
Secretary (I/C)
Karnataka Legislative Assembly

## ANNEXURE

## THE KARNATAKA STATE CIVIL SERVICES (REGULATION OF TRANSFER OF TEACHERS) ACT, 2007 (KARNATAKA ACT NO. 29 OF 2007)

**XXX** **XXX** **XXX**

**2. Definitions.-** In this Act, unless the context otherwise requires,-

**XXX** **XXX** **XXX**

(c) "competent authority" means the authority competent to make orders of transfer of a teacher;

**XXX** **XXX** **XXX**

(j) "unit of seniority" means the jurisdiction of the appointing authority competent to make appointment to the post of teacher;

**XXX** **XXX** **XXX**

**3. Compulsory appointment of a teacher to rural areas.-** (1) Every appointing authority while making initial appointment of a teacher to a school or Pre-University college shall ensure that vacancies in Zone-C shall be filled in the first instance:

Provided that the provisions relating to compulsory appointment of a teacher to the rural area shall not apply to a teacher who has been appointed to a unit of seniority which does not comprise any rural area.

(2) If no vacancy is available for initial appointment or transfer in any particular Zone, a vacancy may be created by transfer of a teacher who has completed minimum number of years of service to another Zone in the order of priority from Zone-C to Zone-B, Zone-B to Zone-A or Zone-A to any other urban area within the same unit of seniority:

Provided that in case any teacher who is serving in Zone-C, is eligible to be transferred to Zone -B and similarly in case a teacher who is serving in Zone-B is eligible to be transferred to Zone-A, but if he desires to continue to serve in zone-C or zone-B, as the case may be, he may be allowed to continue to serve in these respective zones.

**Explanation:** Order of priority shall be calculated interalia, on the basis of the total number of years of service, of a teacher in a zone in different cadres and on the basis of any other criteria as may be prescribed.

(3) The teacher who is in urban area and who is undergoing any time bound penalty imposed under the Karnataka Civil Services (Classification, Control and Appeal) Rules, 1957 or who is facing any criminal charges in court of law may be transferred to Zone-C, if no vacancy is available in Zone-C, a vacancy may be created in the manner specified in sub-section (2).

Provided that if such teacher is working in Zone-B or Zone-C, he shall be transferred from the place where he is working to another place in the same Zone, but he shall not be transferred out side the rural area till the completion of such disciplinary proceedings, criminal proceedings or penalty as the case may be.

**XXX** **XXX** **XXX**

**4. Transfer by counselling.-** The transfer of a teacher under this Act shall be done through a process of computerized counselling conducted in such manner as may be prescribed.

**XXX XXX XXX**

**5. Transfer of teachers in the interest of public service.-** A teacher who is in service on the date of commencement of this Act and has served for not less than 10 years continuously in any school in a zone shall be transferred on the basis of length of service in that school to another school in the same zone within the same unit of seniority:

Provided that the total number of such transfers in a unit of seniority shall not exceed five percent in the case of public interest transfers and three percent in the case of inter unit of seniority transfers, and totally it shall not exceed eight percent of the number of sanctioned posts of teachers in that cadre in that unit of seniority.

**XXX XXX XXX**

**6. Prohibition of transfer of a teacher from one unit of seniority to another unit of seniority.-** (1) There shall be no transfer of a teacher from the unit of seniority in which he is appointed to another unit of seniority except in cases specified in sub-clause (2):

Provided that a teacher who is found surplus in an unit of seniority may be transferred or redeployed to a needy school or pre-university college in another unit of seniority:

Provided further that a teacher who is in service and has completed not less than five years of service on the last day fixed for the submission of transfer application in a unit of seniority may on his request, be transferred through process of counselling to another unit of seniority not more than once in his service subject to ceiling limit specified in the Act.

(2) The provision of sub-section (1) shall be relaxed in the following cases, namely:-

(1) Where both the spouses are Government Servants and the teacher has served for atleast three years service in the existing unit of seniority may also be transferred to the place or nearby place of working of his/her spouse by counselling, depending upon the availability of clear vacancy not more than twice in service.

**XXX XXX XXX**

Government Press, Vikasa Soudha Unit, Bengaluru 21st March, 2017 P7, W.D.1194, Copies 1000